ಮೈಸೂರ ಗಿಜಿಟ್.

ಸಂ. XXXI.] ಸರಕಾರದಿಂದ ಘಾಯಿಷ್ ಆದ್ದು [ನಂ. 9.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 5, ಸ್ ೧೮೯೬.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರ್‌ಗಳು, ಫಾರೆಸ್ಟ್ರು, ರಿಜಿಸ್ಟ್ರೇರ್ಷ ವ ಯಿಡ್ಯೂಕೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಜೆಡ್ಜ್ಯೂಟ್ ಕಮಿಶನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಫೋಸ್ಟ್ಪಾಸಿ ನೋಟಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮುಂಜಾರ್ತಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಸೂಚನೆ: ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 4ನೇ ಫಿಬ್ರವರಿ 1896.

ನಂ. 8979.—ಲೋ. ಫಂ. 257-92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಆಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಕಡೂರು ಗ್ರಾಮದಲ್ಲಿ ಮಾದಿಗರಹಟ್ಟಿಯನ್ನು ಕಟ್ಟುವಬಗ್ಗಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು—ಕಡೂರು, ತಾಲ್ಲೂಕು—ಕಡೂರು, ಗ್ರಾಮ—ಕಡೂರು, ಖಾತೇದಾರನ ಹೆಸರು—ಚಿಕವೆಡಾ.

ಜಮೀನಿನ ತಪ್ಶೀಲ್.

ಸರ್ವೇ ನಂಬರ್—ಪೈಕಿ 73, ವಿಸ್ತೀರ್ಣ—ಖುಷ್ಕೀ 5 ಎಕರೆ 8 ಗುಂಟೆ, ಕಂದಾಯ—ರೂ. 4—12—0.

ಚಕ್ಕ ಬಂದಿ.

ಪೂರ್ವಕ್ಕೆ—ಸರ್ವೇ ನಂಬರ್ 74, ದೇವಯ್ಯನ ಭೂಮಿ.
ಪಶ್ಚಿಮಕ್ಕೆ—ಡಿಟೋ 72, ಲಕ್ಕನ ಭೂಮಿ.
ಉತ್ತರಕ್ಕೆ—ಸರ್ವೇ ನಂ. 69, ಹಸುವನ ಭೂಮಿ.
ದಕ್ಷಿಣಕ್ಕೆ—ಡಿಟೋ 73, ಪೈಕಿ ತಿಮ್ಮನ ಭೂಮಿ.

ನಂ. 8976.—ಲೋ. ಫಂ. 257.—92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜಿಶನ್ ರೆಗ್ಯುಲೇಷನಿನ 6ನೇ ನಿಕರ್ಷ ನಿಯಮಗಳನುಸರಿಸಿ, ಇದರಿಂದ ಪ್ರಕಟ ಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಮನೆ ವ ಜಮೀನ್‌ಗಳು ಸರ್ಕಾರ ಕೆಲಸಕ್ಕೆ ಅಂದರೆ ಗೋರೀಬಿದನೂರು ಪಟ್ಟಣ ಮ್ಯುನಿಸಿಪಾಲಿಟಿಯಲ್ಲಿ ವಂದು ಹೊಸರಸ್ತೆ ಹಾಕುವ ಬಗ್ಗೆ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟ್	ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ಜಮೀನಿನ ತಫ್ಸೀಲ್. ಸಂ.	ವಿವರಣೆ.	ಬೇಕಾದ ವಿಸ್ತೀರ್ಣ.	ದಾವಾಷ್ಟಾಯಿ ಕಂದಾಯ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಗೋರೀಬಿದನೂರು.	ಗೋರೀಬಿದನೂರು ಪಟ್ಟಣ.	ಗಾಣಿಗ ಲಿಂಗಂಣ		ಗಾಣಿಗ ಲಿಂಗಂಣನಬೀದಿಯಲ್ಲಿ ನಾಲ್ಕು ಅಂಕಣ ಮನೆ ಮತ್ತು ಖಾಲಿ ಜಮೀನು	ಲಾ. ರು. ಮ. ಸಲೆ ಅಡಿ 13—6—78		ಸರ್ವೆ ನಂ. 10 11—12	ಬೀದಿ	ಲಿಂಗಂಣನ ಮನೆ ಮತ್ತು ಆಂಗಳ	ಲಿಂಗಂಣನ ಮನೆ ಮತ್ತು ಖಾಲೀ ಅಂಗಳ
			ಡಿಟೋ		ಸದರೀ ಬೀದಿಯಲ್ಲಿ 9 ಅಂಕಣ ಮನೆ	30—6—180		ಡಿಟೋ	ಡಿಟೋ ಲಿಂಗಂಣನ ಮನೆ ಮತ್ತು ಖಾಲೀ ನಿವೇಶನ	ಕುಂಬಾರ ಮುನೆಪ್ಪನ ಮನೆ	ನಾಮ ಸುಬ್ಬಯ್ಯನ ಹಿತ್ತಲು
			ಕುಂಬಾರ ಈಪ್ಪಣ್ಣನ ಮುನಿಯಪ್ಪನ ಮನೆ		8 ಅಂಕಣ ಮತ್ತು ಖಾಲೀ ನಿವೇಶನ	15—6—90		ಡಿಟೋ ನಂಬರ್ 12	ಕುಂಬಾರ ಮುನೆಪ್ಪ ಈಪಿನಯ್ಯ ಮುನೆಪ್ಪನ ಮನೆ ಮತ್ತು ರಸ್ತೆಯಾನೆ ಕಾಲ್ದಾರಿ	ಲಿಂಗಂಣನ ಮನೆ	ಲಿಂಗಂಣನ ಮನೆ
			ಗವುರಯ್ಯನ ವೆಂಕಟರಮಣನ ಜಮೀನ್	12	ತೋಟ	ಎಕರೆ ಗುಂಟೆ 0—4	0—9—7	12ನೇ ಸರ್ವೆ ನಂಬರಿನ ಭಾಗ	ಕುಂಬಾರ ತಿಮ್ಮಪ್ಪ ಮಗ್ಗೆರ ಮನೆಅಂಗಳ	ಸರ್ವೆ ನಂ. 13 ಮತ್ತು ರಂಗಯ್ಯನ ತಲಪರಿಗೆ ವ್ಯೋಣ	ಕುಂಬಾರ ಮುನೆಪ್ಪನ ಮನೆ
			ನಾಮ ರಂಗಯ್ಯನ ಡಿಟೋ	13	ಡಿಟೊ ಮತ್ತು 5 ಅಂಕಣದ ಕಲ್ಲು ಮಂಟಪ	3—2	0—3—5	13ನೇ ಸರ್ವೆ ನಂಬರಿನ ಭಾಗ	ಪನ್ನೆ ಭೂವಿಮು ಸರ್ಕಾರ್ ವ ಗೈರೇರ ಮನೆ		ಸರ್ವೆ ನಂ. 12

ತಾರೀಖು 27ನೇ ಫಿಬ್ರವರಿ 1896.

ನಂ. 10053.—ಯ. 292.—ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರಾದ ಮೆಸ್ಸರ್ ಹೆಚ್. ಜೆ. ಭಾಭಾಯವರಿಗೆ, 1896ನೇ ಇಸವಿ ಮಾರ್ಚಿ 16ನೇ ಮತ್ತು ಲಗಾಯ್ತು ತಮ್ಮ ಯಾ ಅವರು ಉಪಯೋಗಿಸಿಕೊಂಡ ತಾರೀಖು ವೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಸರ್ ಹೆಚ್. ಜೆ. ಭಾಭಾಯವರ ಗೈರ್‌ಹಾಜರೀ ಕಾಲವಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಮೈಸೂರು ಯಾಕ್‌ಸೈಜ್ ಕಮ್ಮಿಷನರಾದ ಮೆಸ್ಸರ್ ಪಿ. ಆರ್. ಪೂರ್ಣಯ್ಯನವರು ಅವರ ಕೆಲಸಗಳೊಂದಿಗೆ ವಿದ್ಯಾ ಇಲಾಖಾ ಇನ್ಸ್‌ಪೆಕ್ಟರ್ ಜನರಲ್‌ರಾಗಿ ಆಕ್ಟಿಂಗ್ ತರೀಕೆ ಕೆಲಸ ನೋಡತಕ್ಕದ್ದು.

ತಾರೀಖು 3ನೇ ಮಾರ್ಚಿ 1896.

ನಂ. 10129.—ಜು. 1100.—ಮೈಸೂರ ಡಿಸ್ಟ್ರಿಕ್ಟ್ ಶ್ರೀರಂಗಪಟ್ಟಣದ ಮುನ್ಸಿಫರಾದ ಮೆಸ್ಸರ್ ಯಂ. ಟಿ. ಗೋಪಾಲಯ್ಯಂಗಾರ್ ಬಿ. ಎ., ಎಲ್. ಎಲ್. ಬಿ. ಯವರಿಗೆ ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 174ನೇ ಆರ್ಟಿಕಲ್ ಮೇರೆ, 1896ನೇ ಇಸವಿ 17ನೇ ಫಿಬ್ರವರಿ ಲಾಗಾಯ್ತು 25ನೇ ತಾರೀಖು ವರಿವಿಗೆ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 8ನೇ ಜನವರಿ 1896.

ನಂ. 6084.—ಫಾ. ಫೈ. 105.—95.—ಡಿಸ್ಟ್ರಿಕ್ಟ್ ಯಾ ಮನ್ನಾ ಅಲ್ಲದ ಸರ್ಕಾರಿ ಜಂಗಲಿಗಳಿಂದ ಮರ ಮತ್ತು ಇತರ ಫಾರೆಸ್ಟ್ ಹುಟ್ಟುವಳಿಯನ್ನು ರೈತರು ತೆಗದುಕೊಳ್ಳುವ ವಿಷಯದಲ್ಲಿ ಅವರ ಹಕ್ಕು ದಾರಿಗಳನ್ನು ಪೂರ್ತಿಯಾಗಿ ವಿವರಿಸಿ, 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 23, 24, 25, ವ 26ನೇ ನಿಕರ್ಷನುಗಳನುಸರಿಸಿ ಉಂಟುಮಾಡಲ್ಪಟ್ಟ ಇದರಡಿ ಕಂಡ ಫಾರೆಸ್ಟ್ ರೂಲ್ಸ್‌ಗಳು, ಫಾರೆಸ್ಟ್ ರೂಲ್ಸ್‌ಗಳು ತಿದ್ದುಪಾಟುಗುವ ನಿರೀಕ್ಷಿಸಿ ಮೇಲೆ, ನಿವೊಗ್ಗಾ ಕಡೂರು ವ ಹಾಸನ ಡಿಸ್ಟ್ರಿಕ್ಟ್‌ಗಳಿಗೋಸ್ಕರ ಮೈಸೂರು ಗವರ್ನ್‌ಮೆಂಟಿನಿಂದ ಮಂಜೂರ್ಮಾಡಲ್ಪಟ್ಟ ಸರ್ಕರ ತಿಳುವಳಿಕೆ ಬಗ್ಯೆ ಪಾಯಿಷ್ ಮಾಡಲ್ಪಟ್ಟಿರುತ್ತೆ. ಈ ರೂಲ್ಸ್‌ಗಳು ಕಾಫಿ ಪ್ಲಾಂಟರುಗಳಿಗೆ ಅಸ್ವಯಿಸುವದಿಲ್ಲವು:—

1. ಈ ರೂಲ್ಸಿಗಳಲ್ಲಿ ರೈತರುಗಳಿಗೆ ಕೊಡಲ್ಪಟ್ಟ ಹಕ್ಕು ದಾರಿಗಳು, ಸೊತ್ತಾಗಿ ವಿವರಿಸಲ್ಪಟ್ಟರತಕ್ಕಂಥಾ ಗ್ರಾಮ ಫಾರೆಸ್ಟುಗಳ ಸರಹದ್ದುಗಳ ಒಳಗೆ ಅವರಿಂದ ಚಲಾಯಿಸಲ್ಪಡತಕ್ಕದ್ದು, ಮತ್ತು ಹಾಂಗೆ ಗ್ರಾಮ ಫಾರೆಸ್ಟುಗಳು ವಿವರಿಸಿ ಗೊತ್ತು ಮಾಡಲ್ಪಡದೇ ಇದ್ದಾಗ ಆ ಬಗ್ಯಾಗಿ ನಿಯಮಿಸಲ್ಪಟ್ಟ ಡಿಸ್ಟ್ರಿಕ್ಟ್ ಫಾರೆಸ್ಟಿನ ಸರಹದ್ದಿನಲ್ಲಿಯಾಗಲಿ ಅಥವಾ ಅದರ ಬಂದು ಭಾಗದಲ್ಲಾಗಲಿ ಚಲಾಯಿಸಲ್ಪಡತಕ್ಕದ್ದು.

2. ಗ್ರಾಮ ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಈ ರೂಲ್ಸಗಳನುಸರಿಸಿ ಫಾರೆಸ್ಟ್ ಹುಟ್ಟುವಳಿಯಾಗತಕ್ಕಂಥಾ ಮರಗಳು ಅಂದರೆ ದಾಲ್‌ಚಿನ್ನಿ ಅಥವಾ ಯಲಗಾ, ಹುಳಿಹಂಣು, ಅಳಲೇಕಾಯಿ, ಕಾಚು, ಗೇರು, ಅರಿದಾಳ, ಅಂಟವಾಳ, ಮಡ್ಡಿಧೂಪ, ಮತ್ತು ಹಾಲ್ ಮಡಿವಕೈರೆ ಹುಟ್ಟುವ ಮರಗಳು ಕಡಿದುಬ್ಬಡಕೂಡದು.

ಗ್ರಾಮ ಮತ್ತು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿನ ಗಂಧ, ತೇಗ, ಬೀಟಿಯಾನೆ ಕರೀಮರ, ಬಳಲಿ, ಹಾಪ್ಪೆ, ಕಾರಾಬಿ ಮತ್ತು ಜಾಲುರಿ ಈ ಜಾತಿ ಮರಗಳು ಪೂರ್ತಿಯಾಗಿ ಫಾರೆಸ್ಟ್ ಇಲಾಖೆಯ ಸ್ವಾತಂತ್ರ್ಯದಲ್ಲಿರತಕ್ಕವು. ರೈತರು ಮತ್ತು ವ್ಯಾಪಾರಸ್ಥರು ಸುದಾ ಈ ತರಹೆ ಮರಗಳಿಗೋಸ್ಕರ, ಫಾರೆಸ್ಟ್ ಇಲಾಖೆಯಿಂದ ವಿಧಿಸಲ್ಪಟ್ಟ ಷರತ್ತುಗಳ ಮೇಲೆ ದರಗಳನ್ನು ಪಾವತಿಮಾಡಬೇಕು.

3. "ಅವಲ್ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹಲಸು, ಹೆಬ್ಬಲಸು, ಮತ್ತಿ, ಹೊನ್ನೆ, ನಂದಿ, ಮತ್ತು ಹಪ್ಪೆ.

"ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು" ಅಂದರೆ ಹುಲ್ಲಿ, ಜಂಬೀಯಾನೆ ಲೆಪ್ಸಿ, ಹುರಗಲು, ಹೆತ್ತಿಗ ಅಥವಾ ಅರಿಸಿನ ತ್ಯಾಗ, ಬಿಲ್ವಾರ, ತೊಡಸಲು, ಚಳ್ಳಿ, ಬಾಗಿ, ಹಡಗ, ನಂಜ ಅಥವಾ ಬಕುಳ, ಸಂಪಿಗೆ, ವಾಟೆ, ಬಲಿಗೆ, ಹೌಲಾಡಿ ಅಥವಾ ಹರಳಬಂಡಿಗೆ ಮತ್ತು ಸಗದೆ ಮರಗಳು.

"ಕಾಡುಮರ" ಅಂದರೆ ಮನ್ನಾ ಜಾತಿ ಅಲ್ಲದ ಮತ್ತು ವಿಂಗಡಿಸಲ್ಪಟ್ಟ ರಖಮಿಗೆ ಸೇರದಂಥಾ ಇತರ ಮರಗಳು.

"ವ್ಯವಸಾಯ ಸಾಧನಗಳು" ಅಂದರೆ ನೇಗಲುಗಳು, ನಾಲು ಹೊಡಿಯುವ ಹಲಿಗೆಗಳು, ಹೆಂಬೆ ಬಡಿಯುವ ತುಂಡುಗಳು, ಸನಿಕೆಗಳು, ಕೂರಿಗೆ, ಮಮ್ಮಟೀ ಕಾನುಗಳು, ಗುದ್ದಲಿ ಕಾವುಗಳು, ಮತ್ತು ಇತರ ತರಾಂ ವ್ಯವಸಾಯ ಸಾಧನಗಳೆಂದು ಅರ್ಥವಾಗತಕ್ಕದ್ದು. ಆದರೆ ಇದರಲ್ಲಿ, ಮಲ್ನಾಡಿನಲ್ಲಿ ವಿನಾ ಅನ್ಯತ್ರ ಕಬ್ಬಿನ ಅಲೆಗಳು, ಭತ್ತ ಕುಟ್ಟುವ ಯಂತ್ರಗಳು, ಮತ್ತು ದನದ ತೊಟ್ಟಿಗಳು ಅಡಗಿರುವದಿಲ್ಲವು.

"ಮಲ್ನಾಡ್" ಅಂದರೆ ಎ. ಅಪೆಂಡಿಕ್ಸಿನಲ್ಲಿ ವಿವರಿಸಲ್ಪಟ್ಟ ತಾಲ್ಲೂಕುಗಳು ಮತ್ತು ತಾಲ್ಲೂಕುಗಳ ಪ್ರದೇಶಗಳು ಎಂದು ಅರ್ಥವಾಗತಕ್ಕದ್ದು; ಇತರ ಎಲ್ಲಾ ಪ್ರದೇಶಗಳೂ, ಮೈದಾನ್ ಎಂದು ಭಾವಿಸಲ್ಪಡತಕ್ಕದ್ದು.

"ರೈತ" ಅಂದರೆ ಒಬ್ಬ ಪಟ್ಟೇದಾರ, ಖಾತೇದ್ದಾರ, ಅಥವಾ ಸರ್ಕಾರದ ಜಮೀನಿನ ಹಿಡುವಳಿಯ ರಿಜಸ್ಟರ್‌ದಾರ ಅಥವಾ ಜಿಲ್ಲರೆ ಇನಾಂದಾರ ಇವರುಗಳೆಂದು ಅರ್ಥವಾಗತಕ್ಕದ್ದಲ್ಲದೆ ಮೇಲ್ಕಂಡ ತರಹೆಯ ಜಮೀನ್ ಹಿಡುವಳಿದಾರರ ಜಾಟೀದಾರರು ಅಥವಾ ಹಿಡುವಳಿದಾರರನ್ನು ಸುದಾ ಅಡಗಿಸಿಕೊಂಡಿರುತ್ತೆ. ಅಂಥಾ ಹಿಡುವಳಿದಾರರು ಅವರ ಪಟ್ಟೇದಾರ್, ಜಿಲ್ಲರೆ ಇನಾಂದಾರ್ ಅಥವಾ ಜಂಟಿ ಹಿಡುವಳಿದಾರರುಗಳೊಂದಿಗೆ, ಈ ರೂಲ್ಸಿನ 10ನೇ ಪ್ಯಾರಾದಲ್ಲಿ ಅಡಗಿರುವ ತೀರ್ಮಾನಿನ ವಳಗಾಗಿ, ಮರ ವ ಪೊಂಬುಗಳನ್ನು ಪಡೆಯುವ ಬ್ಯೆ ಅರ್ಹರಾಗಿ ಇರತಕ್ಕದ್ದು.

4. ಐಂದ ಉಂಟುಮಾಡಲ್ಪಡುವಂಥಾ ಫರ್ಮಾಯಿಷುಗಳಿಗೆ ವಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ಹುಲ್ಲು ಮೇಯಿಸುವ ಬ್ಯೆ ಹಾಲಿ ಇರತಕ್ಕ ಹಕ್ಕು ದಾರಿಗಳಿಗೆ ಈ ರೂಲ್ಸಗಳು ಲಗಾವಾಗುವದಿಲ್ಲವು; ಅಥವಾ ಮಲ್ನಾಡಿನಲ್ಲಿ ಆವರವರ ಸೊಪ್ಪಿನ ಪಟ್ಟಗಳಲ್ಲಿ ತೋಟಗಳ ಸ್ವಂತಗಾರರ ಹಾಲಿ ಇರತಕ್ಕ ಹಕ್ಕುಗಳಿಗಾಗಲಿ ಕಾನುಗಳಲ್ಲಿ ಅವರ ಹಕ್ಕುದಾರಿಗಳಿಗಾಗಲಿ ಈ ರೂಲ್ಸಗಳು ಅನ್ವಯಿಸುವದಿಲ್ಲವು. ರಕ್ಷಣೆ ಬಗ್ಯೆಗಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಾದರೂ ಫಾರೆಸ್ಟ್ ಇಲಾಖೆಯವರಿಂದ ಮುಚ್ಚಲ್ಪಡುವದನ್ನು ಇದರಲ್ಲಿ ಅಡಗಿ ಇರತಕ್ಕ ಯಾವ ಅಂಶವೂ ನಿರೋಧಿಸುವದಿಲ್ಲವು.

5. ಮಲ್ನಾಡ್ ವ ಮೈದಾನಿನ ರೈತರುಗಳು 1 ವ 2ನೇ ರೂಲಿಗೆ ವಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಪರ್ಮಿಟೆಯಾನೆ ಪ್ಯಾಸಿಲ್ಲದೆ ಮುಫತ್ತು ತೆಗದುಕೊಳ್ಳಬಹುದಾದ ಸಾಮಾನುಗಳ್ಯಾವವಂದರೆ:—

1ನೇದು.—ವ್ಯವಸಾಯ ಸಾಧನಗಳಿಗೋಸ್ಕರ ಬೇಕಾದ ಪರಂತು ವಿಂಗಡಿಸಲ್ಪಟ್ಟ ರಖಮಿಗೆ ಸೇರದೆ ಇರತಕ್ಕಂಥಾ ಮರಗಳು. ಪರಂತು ಮಲ್ನಾಡಿನಲ್ಲಿ ದುಯಂ ರಖಮಿನ ವಿಂಗಡಿಸಲ್ಪಟ್ಟ ಮರಗಳು ಈ ಕೆಲಸಕ್ಕೋಸ್ಕರ ಪಟೇಲನ ಬರಹ ಮೂಲಕವಾದ ಅಪ್ಪಣೆ ಚೀಟಿ ಪಡೆದು ತೆಗದುಕೊಳ್ಳಲ್ಪಡಬಹುದು. ಕಡಿಯಲ್ಪಡುವಂಥಾ ಮರಗಳು ಬಲ್ತದ್ದಾಗಿಯಾ ಗಂಟುಗಳಾಗಿ ನಾಟಾ ಬ್ಯೆ ನಾಲಾಯಖಾದ್ದಾಗಿರಬೇಕು. ಮಲ್ನಾಡಿನಲ್ಲಿ ಕಬ್ಬಿನ ಅಲೆಗಳು, ಭತ್ತ ಕುಟ್ಟುವ ಯಂತ್ರಗಳು ದನಗಳ ತೊಟ್ಟಿಗಳು ಇವುಗಳಿಗೋಸ್ಕರ ಮರ ಬೇಕಾದಾಗ ಅಮಲ್ದಾರರಿಂದ ಮಾಫೀ ಪ್ಯಾಸ್ ಪಡೆಯತಕ್ಕದ್ದು. ಈ ಪ್ಯಾಸುಗಳು ಅದರಲ್ಲಿ ವಿವರಿಸೋಣಾದ ವಾಯಿದೆ ವಳಗಾಗಿ ಯಾವ ಗ್ರಾಮದಲ್ಲಿ ಸದರೀ ಮರಗಳು ಕತರಾಯಿಸಲ್ಪಟ್ಟಿತ್ತೋ ಆ ಗ್ರಾಮದ ಪಟೇಲನಿಂದ ಪ್ಯಾಸ್ ಮೂಲಕ ಸಾಗಿಸಲ್ಪಟ್ಟ ಮರದ ತೀರ್ಮಾನಿನ ತಾಲ್ಲೂಕಿಗೆ ಇಂಡಾರ್ಸ್ ಮಾಡಲ್ಪಟ್ಟು ವಾಪಸ್ ಮಾಡಲ್ಪಡತಕ್ಕದ್ದು;

2ನೇದು.—ಬೇಲಿಗಳು, ತಡಿಕೆಗಳು, ಮತ್ತು ಅಣೆಗಳಿಗೋಸ್ಕರ ಬೇಕಾದ ಕೂಚಿಗಳು, ಮುಳ್ಳು ಕಂಪೆಗಳು ಮತ್ತು ಬೊಂಬಿನ ಕಂಪೆಗಳು;

3ನೇದು.—ದನವಪಟ್ಟಿ, ಗುಡಿಸಲು, ಚಪ್ಪರಗಳು, ಚಿಕ್ಕ ಝೋಪಡಿಗಳು, ಮತ್ತು ಹೊಲಗಳಲ್ಲಿ ಹಾಕಬೇಕಾದ ಮಂಚಿಕೆಗಳು ಮತ್ತು ಮೆದೆಹಾಕುವ ಬ್ಯೆ ಸಾಮಾನುಗಳು ಇವುಗಳಿಗೋಸ್ಕರ ಬೇಕಾದ ಮರಗಳು. ಅಂದರೆ ವಿಂಗಡಿಸಲ್ಪಟ್ಟ ರಖಮಿಗೆ ಸೇರದೇ ಯಿರತಕ್ಕಂಥಾ ಮರಗಳು ಮತ್ತು ಬೊಂಬುಗಳು;

4ನೇದು.—ಗೊಬ್ಬರ ಮತ್ತು ಮಂಚಾಲಿಗೋಸ್ಕರ ಕಾಡುಜಾತಿ ಮರಗಳ ಕೊಂಬೆಗಳು; ಮತ್ತು

5ನೇದು.—ಮನೆ ಹೊದಿಸುವ ಬ್ಯೆ ಹುಲ್ಲು.

ಮೇಲ್ಕಂಡ ಸಾಮಾನುಗಳಲ್ಲದೆ, ರೈತರುಗಳು ಮನ್ನಾ ಮತ್ತು ಡಿಸ್ಟ್ರಿಕ್ಟು ಜಂಗಲಿಗಳಿಂದ (ಅಂಥಾ ಜಂಗಲಿಗಳು ಇರತಕ್ಕ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡೆದು ಹುಲ್ಲನ್ನು ಮುಫತ್ತಾಗಿ ಕುಯ್ಯಿದು. ಸಾಗಿಸಬಹುದು.

6. 5ನೇ ರೂಲಿನ 1 ವ 3ನೇ ಕ್ಯಾಜಿಗಳಲ್ಲಿ ವಿವರಿಸಲ್ಪಟ್ಟ ಕೆಲಸಗಳಿಗೋಸ್ಕರ ಮರವನ್ನು ಅಪೇಕ್ಷಿಸುವ ರೈತರು, ಅವರ ಗ್ರಾಮವಲ್ಲದ ಇತರ ಗ್ರಾಮದ ಸರಹದ್ದಿನಲ್ಲಾಗಲಿ ಅಥವಾ ಅನಿರಿಗೋಸ್ಕರ ಬಿಡಲ್ಪಟ್ಟ ಪ್ರದೇಶ ವಿನಾ ಅನ್ಯತ್ರವಾಗಲಿ ಮರವನ್ನು ಕಡಿದಾಯಿಸಲು ಅಪೇಕ್ಷಿಸಿದರೆ, ಅವರು ಸದರೀ ಗ್ರಾಮದ ಪಟೇಲನ ಅಪ್ಪಣೆಯನ್ನು ಪಡಿಯಬೇಕು. ವ್ಯವಸಾಯ ಸಾಧನಗಳಿಗೋಸ್ಕರ ಕಡಿದಾಯಿಸಲ್ಪಡುವ ಮರಗಳ ಪರಿಮಾಣವು, ಅಂಥಾ ಸಾಧನಗಳನ್ನು ತಯಾರ್ಮಾಡುವದಕ್ಕೆ ಅವಶ್ಯಕವಾಗಿ ಬೇಕಾದದಕ್ಕಿಂತಲೂ ಭಾರಿಯಾಗಿರಕೂಡದು. 5ನೇ ರೂಲಿನ 3ನೇ ಕ್ಯಾಜ್ ಅನುಸರಿಸಿ ಮುಫತ್ತಾಗಿ ತೆಗದುಕೊಳ್ಳುವಂಥಾ ಮರವು, ಮಲ್ನಾಡಿನಲ್ಲಾಗಲಿ, ಮೈದಾನಿನಲ್ಲಾಗಲಿ, ಕಬ್ಬಿನ ಆಲೆಗಳು, ಭತ್ತ ಕುಟ್ಟುವ ಯಂತ್ರಗಳು ಮತ್ತು ಮರೆನಾಡಿನಲ್ಲಿನ ದನದ ತೊಟ್ಟಿಗಳು ಇವುಗಳಿಗೋಸ್ಕರ ವಲ್ಲದೆ ಅನ್ಯಥಾ ಸುತ್ತಳತೆಯಲ್ಲಿ ಯರಡು ಅಡಿಗೆ ಮೀರರಕೂಡದು.

6. (a) ಸಾಗರ ವ ನಗರ ತಾಲ್ಲೂಕುಗಳಲ್ಲಿನ ಬಾಜಾವಲ್ಲಿ ಕಂಡ ಮೂಗಣಿಗಳ ರೈತರುಗಳು ಸದ್ಯಃ ಕಾಡುಮರಗಳನ್ನು ಮುಫತ್ತಾಗಿ ವ್ಯಾಸಿಲ್ಲದೆ ತೆಗದುಕೊಳ್ಳತಕ್ಕ ಮರಗಳು.

ಸಾಗರದ ತಾಲ್ಲೂಕು.			ನಗರ ತಾಲ್ಲೂಕು.
ಮರಜಾಡಿ.	ಸಾವಂತನಕಟ್ಟೆ.	ಬ್ರಹ್ಮನವಾಡ.	ಮೂಗನಾಡು. ದ್ದು; ಪರಂತು ಅವರು ತಮ್ಮಿಂದ ತೆಗದು
ಡಿಟೋ	ಸಾರಲಸೊಳೆ.	ನಾಡವಾಡ.	ಕಬ್ಬನಾಡು. ಕೊಳ್ಳಲ್ಪಟ್ಟ ತೇದಾವನ್ನು ಸದರೀ ಗ್ರಾ
ಕಾರೂರು.	ಮೆಳಲಿ.	ಬ್ರಹ್ಮನವಾಡ.	ಮದ ಪಟೇಲನಿಗೆ ರಿಪೋರ್ಟು ಮಾಡಬೇ
ಡಿಟೋ	ಯಿಡವನಿ.	ನಾಡವಾಡ.	ಕು ಅಮಲ್ದಾರರಿಗೆ ಜಾಹಿರ್ಮಾಡತಕ್ಕದ್ದು.
ಸ್ಕಾಲನಾಡು.	ಅವಿನಹಳ್ಳಿ.		

7. ಮಲ್ನಾಡಿನಲ್ಲಿ ರೈತರು ವ್ಯಾಸಿಲ್ಲದೆ ಮುಫತ್ತಾಗಿ ಬೇಲಿಗಳಿಗೋಸ್ಕರ ಜೊಂಬಿನ ಕಂಭೆಗಳನ್ನು ಪಡೆಯುತಕ್ಕದ್ದು; ಮತ್ತು ಕಬ್ಬಿನ ಬೇಲಿ ವ ನೀರಿನ ವಡ್ಡಿಗೋಸ್ಕರ ಬೇಕಾದ ವಣಗಿದ ಈಚಲು ಅಥವಾ ಬಗನಿ ಮರಗಳನ್ನು ವ್ಯವಸಾಯ ಕೆಲಸಗಳಿಗೋಸ್ಕರ ಜತ್ತಗಳನ್ನು ಸುಡಾ ಬದಸ್ತೂರು ಪಡೆಯುತಕ್ಕದ್ದು.

8. ಮಲ್ನಾಡು ವ ಮೈದಾನ ವಿಭಾಗ್ಯಗಳ ರೈತರುಗಳು ಕಟ್ಟಣ ಮತ್ತು ವ್ಯವಸಾಯ ಕೆಲಸಗಳಿಗೋಸ್ಕರ ಬೇಕಾದ ಮರವ ಜೊಂಬುಗಳನ್ನು 1ನೇ ರೂಲಿನಲ್ಲಿ ನಮೂದ್ ಮಾಡಲ್ಪಟ್ಟಿಂಥಾ ಗ್ರಾಮವು ಯಾ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಇದರಡಿ ನಮೂದ್ ಮಾಡಲ್ಪಟ್ಟ ಸುಲಭ ತೀರ್ವೇ ಪಾವತಿ ಮಾಡಿ ತೆಗದುಕೊಳ್ಳಬಹುದು. ಪರಂತು, ಹಾಂಗೆ ಪಡೆಯೋಣಾದ ಮರ ವ ಜೊಂಬುಗಳು, ಸದರೀ ಫಾರೆಸ್ಟು ಕಿರಿಸಲ್ಪಟ್ಟಿರತಕ್ಕಂಥಾ ಅಥವಾ ಗೊತ್ತು ಮಾಡಲ್ಪಟ್ಟಿರತಕ್ಕಂಥಾ ಗ್ರಾಮದಲ್ಲಿ ಇರತಕ್ಕ ಅನಿರ ವ್ಯವಸಾಯದ ಮನೆಗಳನ್ನು ಮತ್ತು ವಾಸಮಾಡುವ ಮನೆಗಳನ್ನು ಕಟ್ಟುವ ಬಗ್ಯೂ ರಿಪೇರಿ ಮಾಡುವ ಬಗ್ಯೂ ಉಪಯೋಗಿಸಲ್ಪಡತಕ್ಕದ್ದು.

		ರೂ.	ಆ.	ಪೈ.
ಮಲ್ನಾಡಿನಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಶಿವಾಯಿ) ಭಂಡಿ ಜೋಜಾ 1ಕ್ಕೆ	3	0	0
	ಹೊನ್ನೇಮರ, ಭಂಡಿ ಜೋಜಾ 1ಕ್ಕೆ	5	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ, ಭಂಡಿ ಜೋಜಾ 1ಕ್ಕೆ	1	0	0
	ಕಾಡುಜಾತಿ ಮರಗಳು, ಭಂಡಿ ಜೋಜಾ 1ಕ್ಕೆ ಮತ್ತು ಕಿರಿಬಿದರು ದರ 100ಕ್ಕೆ	0	8	0
	ಕಾಡುಮರದ ಕೂಡಗಳು ದರ ಭಂಡಿ ಜೋಜಾ 1ಕ್ಕೆ	0	8	0
	ಗರಟೆಯಾನೆ ಚಿಕ್ಕಗುಟ್ಟ ಜೊಂಬುಗಳು ದರ 100ಕ್ಕೆ	0	4	0
	ಹೆಬ್ಬಿದರು, ದರ 100ಕ್ಕೆ	0	0	0
ಮೈದಾನದಲ್ಲಿ	ವಿಂಗಡಿಸಲ್ಪಟ್ಟ ಅವಲ್ ರಖಮಿನ ಮರಗಳು (ಹೊನ್ನೆ ಶಿವಾಯಿ) ಭಂಡಿ ಜೋಜಾ 1ಕ್ಕೆ	5	0	0
	ಹೊನ್ನೇಮರ, ಭಂಡಿ ಜೋಜಾ 1ಕ್ಕೆ	7	0	0
	ವಿಂಗಡಿಸಲ್ಪಟ್ಟ ದುಯ್ಯಂ ರಖಮಿನ ಮರ ಭಂಡಿ ಜೋಜಾ 1ಕ್ಕೆ	2	0	0
	ಕಾಡುಜಾತಿ ಮರ, ಭಂಡಿ ಜೋಜಾ 1ಕ್ಕೆ ಕಿರಿಬಿದರು ದರ 100ಕ್ಕೆ	1	8	0
	ಹೆಬ್ಬಿದರು ದರ 100ಕ್ಕೆ	3	8	0

ಸೊರಬ ವ ಶಿಕಾರಿಪುರ ತಾಲ್ಲೂಕಿನ ಅರ್ಧ ಮಲೆನಾಡ ಮೂಗಣಿಗಳಲ್ಲೂ, ಕುಮಸಿ ಸಬ್ ತಾಲ್ಲೂಕಿನಲ್ಲೂ ಮತ್ತು ಹೆಬ್ಬೈಟ್ ಕಮ್ಮಿಷನರವರು ಮೈಸೂರು ಗೆಜೆಟ್ಟಿನಲ್ಲಿ ಡಿಸ್ಟ್ರಿಕ್ಟು ಆರ್ಡರ್‌ನ್ನು ಪ್ರಕಟ ಪಡಿಸುವದರ ಮೂಲಕ ಈ ರೂಲಿನ ರಿಯಾಯತಿಗಳನ್ನು ವಿಸ್ತರಿಸಬಹುದಾದಂಥಾ ತಿವಳೋಗ್ಯಾ ತಾಲ್ಲೂಕಿನ ಯಾವದಾದರೂ ಮೂಗಣಿಗಳಲ್ಲೂ—

ಕಿರಿಬಿದರು ದರ 100ಕ್ಕೆ . . . . . 1 ರೂಪಾಯಿ.

9. ಯಾವದಾದರೊಂದು ಬಟ್ಟದಪಳ್ಳದ ಯಾ ಅನಕ್ಕೆ ಬಂದು ಕೀರುವ ಕಾಲವೆಗಳ ಧಡಗಳಿಂದ 50 ಗಜದ ಒಳಗಿನ ಫಾಸಲೆ ಯಲ್ಲಾಗಲಿ, ಅಥವಾ ಯಾವದಾದರೂ ಜಲಧಾರದ ಮೂಲದಿಂದ 50 ಗಜಗಳ ಕಮ್ಮಿ ಫಾಸಲೆಯಲ್ಲಾಗಲಿ ಅಥವಾ ಯಾವದಾದರೂ ರಸ್ತೆಯಿಂದ 50 ಗಜಗಳ ಫಾಸಲೆ ಒಳಗಾಗಲಿ ಯಾವ ಡಿಸ್ಟ್ರಿಕ್ಟು ಫಾರೆಸ್ಟಿನೊಳಗಾದರೂ ಮರ, ಸೊಪ್ಪಿ, ಜೊಂಬುಗಳು ಅಥವಾ ಜಂಗಲ್ ಕಡಿದಾಯಿಸಲ್ಪಡಕೂಡದು, ಮತ್ತು ಅಲ್ಲಿ ಯಾವ ಮರ ಅಥವಾ ಹುಲ್ಲಾಗಲಿ ಸುಡಲ್ಪಡಕೂಡದು.

10. 8ನೇ ರೂಲ್ ಅನುಸರಿಸಿ ಸುಲಭ ತೀರ್ವೇ ಮೇಲೆ ಕೊಡಲ್ಪಡುವ ಮರಗಳು ಒಬ್ಬ ರೈತನಿಗೆ ಮೈದಾನಿನಲ್ಲಿ ವಂದು ದಸ್ಸಾಲಿನಲ್ಲಿಯೂ, ಮಲ್ನಾಡಿನಲ್ಲಿ ವಂದು ಪಂಚಸಾಲಿನಲ್ಲಿಯೂ 50 ಭಂಡಿ ಜೋಜಾಗಳಿಗೆ ಜಾಸ್ತಿಯಾಗಕೂಡದು. ಪ್ರತಿ ಸಂಗತಿಯಲ್ಲಿಯೂ 50 ಭಂಡಿ ಜೋಜಾ ಮರಗಳು ಅವಶ್ಯವಾಗಿ ಕೊಡಬೇಕೆಂದು ಅರ್ಥಮಾಡಲ್ಪಡಕೂಡದು. ಇದು ಕೊಡಬಹುದಾದ ಜಾಸ್ತೀ ತೇದಾದು ಆಗಿರುತ್ತೆ. ಪ್ರತಿ ಸಂಗತಿಯಲ್ಲಿಯೂ ಅಮಲ್ದಾರರು ರೈತನ ಆವಶ್ಯಕತೆಯನ್ನು ತಿಳಿದುಕೊಂಡು ವಾಸ್ತವ್ಯವಾಗಿ ಬೇಕಾಗುವ ತೇದಾವನ್ನು ಕೊಡತಕ್ಕದ್ದು. ಮತ್ತು ಈ ರಿಯಾಯತಿಯು ದುರುಪಯೋಗ ಪಡಿಸದಂತೆ ಅಮಲ್ದಾರರು ನಿಗಾ ಇಡಬೇಕಾಗಿರುತ್ತೆ. ಅಮಲ್ದಾರ್ರು ಮರ್ರ ಅಥವಾ ಜೊಂಬುಗಳಿಗೋಸ್ಕರ ಬರುವ ದರಖಾಸ್ತುಗಳನ್ನು ಅವ್ರು ಅದರಿಂದ ಫೀಯಿದೆ ಪಡೆಯುವ ಬಗ್ಯೂ ದರಖಾಸ್ತು ಮಾಡಲ್ಪಟ್ಟಿರುತ್ತೆಂದು ಕಂಡುಬಂದ ಸಂದರ್ಭದಲ್ಲಿ ಲೈಸೆನ್ಸು ಕೊಡವೆ ತಿರಸ್ಕರಿಸಬಹುದು.

11. ರೈತರುಗಳಿಗೆ 7, 8 ವ 10ನೇ ರೂಲಿಗಳಿಂದ ಉಂಟುಮಾಡಲ್ಪಟ್ಟ ರಿಯಾಯತಿಗಳು ವಾಸ್ತವವಾಗಿ ಅವರ ಸ್ವಂತ ಉಪಯೋಗಕ್ಕೋಸ್ಕರ ಮಾತ್ರವೇ ಆಗಿರುತ್ತೆ. ಸದರೀ ಮೇಲ್ಕಂಡ ರೂಲ್ಸ್ ಅನುಸರಿಸಿ ಪಡೆಯೋಣಾದ ಯಾವ ಸಾಮಾನುಗಳಾಗಲಿ, ಅವರಿಂದ ವರ್ಗ, ಖರೀದಿ ಯಾ ವ್ಯಾಪಾರ ಉದ್ದಿಶ್ಯ ಅನ್ಯಾಕ್ರಾಂತ ಮಾಡಲ್ಪಡಕೂಡದು.

12. ರೂಲ್ 8ರ ಅನುಸಾರವಾಗಿ ಮರ, ಯಾ ಬೊಂಬುಗಳನ್ನು ಪಡೆಯಲು ಅಪೇಕ್ಷಿಸುವಂಥಾ ಯಾವ ರೈತನಾದರೂ, ಸದರೀ ರೂಲ್ ಪ್ರಕಾರ ತಾನು ಕತರಾಯಿಸಲು ಹಕ್ಕುವುಳ್ಳ ಜಂಗಲಿಯು ಇರತಕ್ಕಂಥಾ ಸರಹದ್ದಿನ ತಾಲ್ಲೂಕು ಅಮಲ್ದಾರರಿಗೆ ದರಖಾಸ್ತು ಮಾಡತಕ್ಕದ್ದು.

13. 8ನೇ ರೂಲ್‌ನಲ್ಲಿ ವಿಧಿಸೋಣಾದ ಸೀನಿಯಾರೇಜ್ ಯಾನೆ ತೀರ್ವೆಯು ಪಾವತಿ ಮಾಡಲ್ಪಟ್ಟ ತರುವಾಯ ಅಮಲ್ದಾರರು ಆರ್ಡಿಕ್ಸ್ ಬಿ. ನಮೂನೆಯಲ್ಲಿ ಬಂದು ಲೈಸೆನ್ಸನ್ನು ಕೊಡತಕ್ಕದ್ದು. ಅಂಥಾ ಲೈಸೆನ್ಸು ವರ್ಗಮಾಡಲ್ಪಡತಕ್ಕದ್ದಲ್ಲ. ಸದರೀ ಲೈಸೆನ್ಸಿನ ಷರತ್ತುಗಳ ಪ್ರಕಾರ ನಡೆದುಕೊಳ್ಳುವದು ಲೈಸೆನ್ಸುದಾರನಿಗೆ ಕರ್ತವ್ಯವಾಗಿರುತ್ತೆ. ವಾಯಿದೆ ಮೀರಿದ ತವಾಂ ಲೈಸೆನ್ಸುಗಳೂ ರದ್ದಾಗಿರತಕ್ಕವು. ಉಪಯೋಗಿಸಲ್ಪಡದ ಲೈಸೆನ್ಸುಗಳಿಗೋಸ್ಕರ ತೀರ್ವೆಯು ವಾಪಸು ಮಾಡಲ್ಪಡಕೂಡದು, ಅಥವಾ ಅವುಗಳಿಗೆ ಬದಲಾಗಿ ಹೊಸ ಲೈಸೆನ್ಸು ಕೊಡಲ್ಪಡತಕ್ಕದ್ದಲ್ಲವು.

14. ಲೈಸೆನ್ಸುದಾರನು, ಸದರೀ ಲೈಸೆನ್ಸಿನಲ್ಲಿ ಕಂಡ ಡಿಸ್ಟ್ರಿಕ್ಟು ಫಾರೆಸ್ಟ್ ನರಹದ್ದುಗಳು ಕೀರಿ ಇರುವಂಥಾ ಗ್ರಾಮದ ಪಟೇಲನಿಗೆ ಸದರೀ ಲೈಸೆನ್ಸಿನ ಆಧಾರದ ಮೇಲೆ ತಾನು ಸಾಗಿಸತಕ್ಕಂಥಾ ಮರ ಯಾ ಬೊಂಬುಗಳು ಅಥವಾ ಇತರ ಸಾಮಾನುಗಳು ಇವುಗಳನ್ನು ತಸಿಖೀ ಬ್ಯೆ ಹಾಜರ್ಮಾಡುವದಕ್ಕೆ ಮತ್ತು ಅದರಲ್ಲಿ ನಮೂದಾದ ತೇದಾದು ಕರಾರ್ವಾಕಾ ಇರುತ್ತೆಂದು ಪಟೇಲನಿಂದ ಇಂಡಾರ್ಸಮೆಂಟಿಯಾನೆ ಪರಾ ಬರಿಸಿಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು. ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ತರುವಾಯ ಲೈಸೆನ್ಸು ಸಮೇತ ಸಾಗಿಸಲ್ಪಟ್ಟು ಸದರೀ ಲೈಸೆನ್ಸು ಅಂಥಾ ಮರ, ಬೊಂಬುಗಳು ಅಥವಾ ಇತರ ಪದಾರ್ಥಗಳು ಕೀರಿಸಲ್ಪಡುವಂಥಾ ಗ್ರಾಮದ ಪಟೇಲನಿಗೆ ತಪ್ಪಿಸಲ್ಪಡತಕ್ಕದ್ದು, ಸದರೀ ಪಟೇಲನು ಲೈಸೆನ್ಸಿನೊಂದಿಗೆ ತೇದಾದನ್ನು ಪೊಕ್ಕಾಪಿಲೆ ಮಾಡಿ ಸದರೀ ಲೈಸೆನ್ಸನ್ನು ತನ್ನ ಸರ್ಟಿಫಿಕೇಟ್ ಸಮೇತ ತಾಲ್ಲೂಕು ಅಮಲ್ದಾರ್ರಿಗೆ ಕಳುಹಿಸತಕ್ಕದ್ದು. ಅವರು ಲೈಸೆನ್ಸನ್ನು ಸಾದರ್ಮಾಡದವರಾಗಿದ್ದರೆ ಅದು ಸಾದರ್ಮಾಡಲ್ಪಟ್ಟಿಂಥಾ ಅಮಲ್ದಾರರಿಗೆ ಕಳುಹಿಸತಕ್ಕದ್ದು. ಲೈಸೆನ್ಸಿನಲ್ಲಿ ಕೊಡೋಣಾದ ತೇದಾದು ಹುಟ್ಟಬಹುದಾದಂಥಾ ಮರಗಳು ಮಾತ್ರವೇ ಕತರಾಯಿಸಲ್ಪಡತಕ್ಕದ್ದು. ಮನ್ನಾನೆ ಅಥವಾ ನಪ್ಪ್ವಾಗುವಂತೆ ಕತರಾಯಿಸಿದರೆ ಈ ರಿಯಾಯತಿಯು ಅಂಥಾ ರೈತನಿಂದ ಪೂರ್ತಿಯಾಗಿಯಾದರೂ ಅಥವಾ ಕೆಲವು ಕಾಲದ ಮಟ್ಟಿಗಾದರೂ ವಾಪಸು ತೆಗದುಕೊಳ್ಳಲ್ಪಡುವದು.

15. ಮಲ್ನಾಡ್ ರೈತರಿಗೆ 5ನೇ ರೂಲಿನಲ್ಲಿ ಗೊತ್ತು ಮಾಡಲ್ಪಟ್ಟ ಮಾಫೀ ರಕದಾರಿಗಳು ಮತ್ತು 13ನೇ ರೂಲಿನಲ್ಲಿ ನಮೂದ್ಮಾಡಲ್ಪಟ್ಟ ತೀರ್ವೇ ಸಂದ ಲೈಸೆನ್ಸುಗಳು ಸುದಾ ಫಾರೆಸ್ಟ್, ರೆವಿನ್ಯೂ, ಪೋಲೀಸ್ ಆಫಿಸರ್‌ಗಳಿಂದ ತಸಿಖೆ ನೋಡಲ್ಪಡುವ ಬಗ್ಯೆ ವಳಪಟ್ಟಿರತಕ್ಕದ್ದು, ಸದರೀ ಆಫಿಸರ್‌ಗಳು ಸದರೀ ಲೈಸೆನ್ಸಿನ ಷರತ್ತುಗಳು ಅತಿಕ್ರಮಿಸಲ್ಪಡಲಿಲ್ಲವೆಂದು ಅಥವಾ ವುಲ್ಲಂಘಿಸಲ್ಪಡಲಿಲ್ಲವೆಂದು ನೋಡುವ ಬಗ್ಯೆ ಬದ್ಧರಾಗಿರುತ್ತಾರೆ.

15 ಎ. ಯಾವ ಜಂಗಲಿಯಾಗಲಿ ಅಥವಾ ಅವರ ಭಾಗವಾಗಲಿ ವಿಶೇಷವಾಗಿ ಕತರಾಯಿಸಲ್ಪಟ್ಟ್ಯಾಗ ಡೆವ್ಯೂಟಿ ಕಮ್ಮಿಷನರವೆರು ಅಂಥಾ ಜಂಗಲಿ ಯಾ ಬಂದು ಭಾಗವನ್ನು ಅವಶ್ಯಕವಾದ ವಾಯಿದೆ ಪರಿಯಂತ ಬಂದು ಮಾಡಿ ಆ ಸಂಗತಿಯನ್ನು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲು ಸ್ವತಂತ್ರರಿರುತ್ತಾರೆ.

16. ಮಲ್ನಾಡಿನ "ಕಾನುಗಳಲ್ಲಿ" ಅಥವಾ ಫಾರೆಸ್ಟ್ ಯಾ ರೆವಿನ್ಯೂ ಇಲಾಖೆಯವರು 4 ಅಥವಾ 15 ಎ. ಪ್ಯಾರಾ ಅನುಸರಿಸಿ ಬಂದ್ ಮಾಡಿರುವಂಥಾ ಯಾವದಾದರೂ ಗವರ್ಮೆಂಟ್ ಜಂಗಲಿಗಳಲ್ಲಿ ಮರಾ ಯಾ ಬೊಂಬುಗಳನ್ನು ಕತರಾಯಿಸುವ ಬಗ್ಯೆ ಯಾವ ಲೈಸೆನ್ಸೂ ಕೊಡಲ್ಪಡಕೂಡದು. ಯಾವದಾದರೂ ಜಂಗಲಿಯು ಬಂದ್ ಮಾಡಲ್ಪಟ್ಟ ಸಂಗತಿ ಕೂಡ್ಲೆ ಸದರೀ ತಾಲ್ಲೂಕು ಅಮಲ್ದಾರ್ರಿಗೆ ತಿಳಿಸಲ್ಪಡಬೇಕು.

17. 8ನೇ ಪ್ಯಾರಾದಲ್ಲಿ ವಿವರಿಸಲ್ಪಟ್ಟ ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕತರಾಯಿಸಿ ಸಾಗಿಸುವಂಥಾ ಅಥವಾ ಅವಶ್ಯಕವಾದ ಲೈಸೆನ್ಸು ಪಡಿಯದೆ ಬಂದು ಡಿಸ್ಟ್ರಿಕ್ಟು ಫಾರೆಸ್ಟಿನಿಂದ ಸದರೀ ಲೈಸೆನ್ಸಿನಲ್ಲಿ ನಮೂದಾದ ತೇದಾದನ್ನು ಮೀರುವಂಥಾ ಯಾವ ರೈತನಾದರೂ ಗೊತ್ತಾದ ವಾಯಿದೆಯಲ್ಲಿ ಲೈಸೆನ್ಸನ್ನು ವಾಪಸು ಮಾಡುವದಕ್ಕೆ ತಪ್ಪಿದರೆ ಅಥವಾ ಸದರೀ ಲೈಸೆನ್ಸಿನ ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಈ ನಿಬಂಧನೆಗಳ ನಿಯಮಗಳನ್ನು ತಪ್ಪು ನಡದರೆ ಅವನು 1878ನೇ ಇಸವಿಯ ಫಾರೆಸ್ಟ್ ರೂಲ್ಸಿನ 40ನೇ ಸೆಕ್ಷನ್ ಅನುಸರಿಸಿ ದಂಡನೆಗೆ ಗುರಿಯಾಗಿರತಕ್ಕದ್ದು.

18. ಮೇಲೆ ಕೊಡೋಣಾದ ರಿಯಾಯತಿಗಳಿಗೋಸ್ಕರ, ಸ್ಟೇಟ್ ಫಾರೆಸ್ಟ್‌ಗಳು ವ ಪ್ಲಾಂಟೇಷನ್‌ಗಳ ಸೆರೆಹೊರೆಯಲ್ಲಿ ವಾಸವಾಗಿರುವಂಥಾ ರೈತರುಗಳು ಸದರೀ ಸ್ಟೇಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ವುಂಟಾಗಬಹುದಾದ ಬೆಂಕಿಯನ್ನು ನಿರೋಧಪಡಿಸುವದಕ್ಕೆ, ತಗ್ಗಿಸುವದಕ್ಕೆ ಅಥವಾ ಆರಿಸುವದಕ್ಕೆ ಫಾರೆಸ್ಟ್ ಇಲಾಖೆಯವರಿಗೆ ಕುಮ್ಮಕ್ ಮಾಡಬೇಕಾಗಿ ಇರುತ್ತೆ. ಈ ವಿಷಯದಲ್ಲಿ ಅಕ್ರಮದ್ಧೆಯೇನಾದರೂ ತೋರಿಬಂದರೆ ರಿಯಾಯತಿಗಳು ಪೂರ್ತಿಯಾಗಾಗಲಿ ಕೆಲವು ಮಟ್ಟಿಗಾಗಲಿ ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ರವರು ಗೊತ್ತು ಮಾಡುವಂಥಾ ಬಂದು ವಾಯಿದೆ ಪರಿಯಂತ ವಾಪಸು ತೆಗದುಕೊಳ್ಳಲ್ಪಡುವ ಬಗ್ಯೆ ಗುರಿಯಾಗಿರತಕ್ಕದ್ದು.

19. ರೈತರು ಬಂದು ಡಿಸ್ಟ್ರಿಕ್ಟು ಫಾರೆಸ್ಟಿನಲ್ಲಿ ಹುಲ್ಲು, ತರಗು, ಮುಳ್ಳು, ಅಥವಾ ಬಿದರು ಕಂಬೆಗಳಿಗೆ ಬೆಂಕಿ ಹಚ್ಚಿ ತದ್ವಾರಾ ಬಂದು ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನನ್ನು ಅಪಾಯ ಪಡಿಸದಂತೆ ಖಂಡಿತವಾಗಿ ನಿರೋಧಿಸಲ್ಪಟ್ಟಿರುತ್ತಾರೆ.

159

20. ಇದರಡಿಕಂಡ ಇಸ್ತಿಹ್ಹಾರ್‌ನಾಮೆಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ:—

1873ನೇ ಇಸವಿ ಏಪ್ರಿಲ್ 23ನೇ ಮಾರ್ಚ್ಂ 5ನೇ ನಂಬರ್ ಇಸ್ತಿಹಾರ್‌ನಾಮೆ.
1874ನೇ ಇಸವಿ ಆಗಸ್ಟ್ 31ನೇ ಮಾರ್ಚ್ಂ 153ನೇ ನಂಬರ್ ಇಸ್ತಿಹಾರ್‌ನಾಮೆ ಮತ್ತು ಇದನ್ನು ರದ್ದು ಮಾಡುವ 1887ನೇ ಇಸವಿ ಫಿಬ್ರವರಿ 11ನೇ ಮಾರ್ಚ್ಂ 244ನೇ ನಂಬರ್ ಇಸ್ತಿಹಾರ್‌ನಾಮೆ.
1873ನೇ ಇಸವಿ ಡಿಸೆಂಬರ್ 19ನೇ ಮಾರ್ಚ್ಂ 5323–83ನೇ ನಂಬರ್ ಪ್ರೊಸಿಡಿಂಗ್ಸ್.
1892ನೇ ಇಸವಿ ಡಿಸೆಂಬರ್ 9ನೇ ಮಾರ್ಚ್ಂ 9837—ಆರ್. ಎಫ್. 226—92ನೇ ನಂಬರ್ ಪ್ರೊಸಿಡಿಂಗ್ಸ್.
1893ನೇ ಇಸವಿ ಸೆಪ್ಟೆಂಬರ್ 25ನೇ ಮಾರ್ಚ್ಂ 5822—ಆರ್. ಎಫ್. 226–92ನೇ ನಂಬರ್ ಪ್ರೊಸಿಡಿಂಗ್ಸ್.

ಇವುಗಳು ತಿಪಟೂರ್ ತಾ|| ಹಾಗೂ ಕಡೂರ್ ತಾ|| ಹಾಗೂ ಚಿಕ್ಕಮಗಳೂರ್ ತಾ|| ಗಳಿಗೆ ಅನ್ವಯಿಸುವವು.

8ನೇ ರೂಲಿನಲ್ಲಿ ನಮೂದಾದ "ಭಂಡಿಬೋಜಾ" ಅಂದರೆ ಯರಡು ಯತ್ತುಗಳಿಂದ ಯಳೆಯಲ್ಪಟ್ಟು ಕಂತ್ರಿ ಭಂಡಿಯಂದು ಅರ್ಥವಾಗತಕ್ಕದ್ದು. ನಾಲ್ಕು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ಬೋಜಾಕ್ಕೆ ದರವು ಯರಡು ಯತ್ತುಗಳಿಂದ ಯಳೆಯಲ್ಪಟ್ಟ ಭಂಡಿ ದರಕ್ಕೆ ದ್ವಿಗುಣಿಯಾಗಿ ಇರತಕ್ಕದ್ದು. ಮತ್ತು ಭಂಡಿ ಬೋಯುವ ಬಗ್ಗೆ ಜಾಸ್ತಿಯಾಗಿ ಕೊಡಲ್ಪಡುವ ಪ್ರತಿ ಬಂದು ಜೋಡಿ ಯತ್ತಿಗೂ ಬದಸ್ತೂರ್ ಜಾಸ್ತೀ ಮಾಡಲ್ಪಡತಕ್ಕದ್ದು.

ಹುಕುಂ ಬಮ್ಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರವಿನ್ಯೂ ಸೆಕ್ರಟರಿ.

ಅಪೆಂಡಿಕ್ಸ್ A.

ಶಿವಮೊಗ್ಗ ಡಿಸ್ಟ್ರಿಕ್ಟು.—ತೀರ್ಥಹಳ್ಳಿ, ಸಾಗರ ವ ನಗರ ತಾಲ್ಲೂಕುಗಳು ಮತ್ತು ಸೊರಬ, ಕ್ಯಾಸನೂರು, ಚಂದ್ರಗುತ್ತಿ, ಚಿತ್ತೂರು, ಪಿಗ್ಗಾ ಮಾಗಣಿಗಳು ಮತ್ತು 1891ನೇ ಇಸವಿ ಆಕ್ಟೋಬರ್ 6ನೇ ಮಾರ್ಚ್ಂ 281ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರತಕ್ಕಂಥಾ ಅಂಡಿಗೆ, ತವನಂದಿ ಮತ್ತು ವುದ್ರಿ ಮಾಗಣಿಗಳ ಗ್ರಾಮಗಳು. ಸೊರಬ ತಾಲ್ಲೂಕಿನಲ್ಲಿ ಹೆಚ್ಚೆ ಮತ್ತು ಕಳಂದೂರು, ವ ಬ್ಯಾರೂರು ಮಾಗಣಿಗಳು, ಮತ್ತು ಪಿಕಾರಿಪುರ ತಾಲ್ಲೂಕು ದಾನಂದೂರು ಮಾಗಣಿ ದಾನಂದೂರು ಗ್ರಾಮ ಮತ್ತು 1891ನೇ ಇಸವಿ ಸೆಪ್ಟೆಂಬರ್ 30ನೇ ಮಾರ್ಚ್ಂ 280ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಡಗಿರುವ ದಾನಿವಾಸ, ಕೋಣನಾಡ್, ಗಾಜನೂರ್, ಲಕ್ಕವಳ್ಳಿ, ಕುಂಸಿ, ಜೋಕಡಿ ವ ಆಯನೂರು ಈ ಮಾಗಣಿಗಳಲ್ಲಿನ ಗ್ರಾಮಗಳು.

ಹಾಸನ ಡಿಸ್ಟ್ರಿಕ್ಟು.—ಮಂಜೆರಾಬಾದ್ ತಾಲ್ಲೂಕಿನ ಬ್ಯಾಗಡಹಳ್ಳಿ, ಮಾರನಹಳ್ಳಿ ವ ಹಾನೆಬಾಳ್ ಹೋಬಳಿಗಳು.

ಕಡೂರು ಡಿಸ್ಟ್ರಿಕ್ಟು.—ಕೊಪ್ಪ ವ ಮೂಡಗೆರೆ ತಾಲ್ಲೂಕುಗಳು, ಶೃಂಗೇರಿ ತಾಲ್ಲೂಕಿನ ಲಿಂಗದಹಳ್ಳಿ ವ ಲಕ್ಕವಳ್ಳಿ ಮಾಗಣಿಗಳು. ವಸ್ತಾರೆ, ಆಯನೂರು, ಕಡಗಲ್‌ನಾಡ್, ತಲದುನಾಡ್, ಆಲ್‌ದೂರ್, ಜಾಗರ, ಸಿರವಾಸ, ಮತ್ತು ಲಿಂಗೇನಹಳ್ಳಿ ಮಾಗಣಿಗಳು ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಮಾಗಣಿ ಹಿರೆಕೊಳಲೆ, ಚಿಕ್ಕೊಳಲಿ ಮತ್ತು ಆರಳಗುಪ್ಪೆ ಗ್ರಾಮಗಳು.

B. ನಮೂನೆ.

ರೈತರ ಹಕ್ಕುಗಳ ರೋಲ್ಸ್ ಅನುಸರಿಸಿ ಮರ, ಬೊಂಬುಗಳು ವ ಇತರ ಸಾಮಾನುಗಳನ್ನು ಕತರಾಯಿಸುವದಕ್ಕೆ, ಸಾಗಿಸುವದಕ್ಕೆ ಕೊಡಲ್ಪಟ್ಟ ಲೈಸೆನ್ಸು.

ಲೈಸೆನ್ಸು ಪಡೆದ ರೈತನ ಹೆಸರು ಮತ್ತು ವಾಸಸ್ಥಳ.	ಮರ, ಬೊಂಬುಗಳು ಅಥವಾ ಇತರ ಸಾಮಾನುಗಳನ್ನು ಕಡಿಯಿಸುವ ಬಗ್ಗೆ ಲಭ್ಯವಿರುವ ಪ್ರದೇಶದ ಹೆಸರು.	ಕತರಾಯಿಸಲ್ಪಡಬೇಕಾದ ಫಾರೆಸ್ಟ್ ನ ಗ್ರಾಮದ ಹೆಸರು.	ಮರ ಬೊಂಬುಗಳು ಯಲ್ಲಿಗೆ ಮತ್ತು ಎಷ್ಟನ್ನರ ತಾಯಿತ ಳಗೆ ಸಾಗಿಸಲ್ಪಡಬೇಕಾದ ಜಾಗದ ಹೆಸರು.	ಸೀನಿಯಾರೇಜ್ ಯಾನೆ ತೀರ್ವೆ.		ಹಪರಾಯಿಸಲ್ಪಡಬೇಕಾದ ವರ್ಷಗಳ ವಿವರಣೆ.	ಅಥರ ವರ್ಷಗಳು ಯೇನಾದ್ರೂ ಇದ್ದರೆ.	ಮರ, ಬೊಂಬುಗಳು, ಅಥವಾ ಇತರ ಸಾಮಾನುಗಳು ಕಾಡಿನಿಂದ ಯಿಸಲ್ಪಟ್ಟು ನರಹದ್ದಿನ ಗ್ರಾಮದ ಪಟೇಲನಿಗೆ ತನಿಖೆ ಮಾಡಿ ಲ್ಯಡುವ ಬಗ್ಗೆ ಒಪ್ಪಿದ ತಾರೀಖು.	ಮರ ಬೊಂಬುಗಳು ಅಥವಾ ಇತರ ಸಾಮಾನುಗಳು ಸಾಗಿಸಲ್ಪಟ್ಟು ಗ್ರಾಮದ ಪಟೇಲನಿಂದ ಅಪ್ಪಣೆ ತನಿಖಿ ಮಾಡಿ ಲ್ಯಡುವ ಬಗ್ಗೆ ಹೂಡಲ್ಪಡಿದ ತಾರೀಖು.	ತಾಲ್ಲೂಕಿನ ಎಮಲೆದಾರರಿಗಾಗಲಿ ಅಥವಾ ಅದು ಸೇದರ್ಮಾಡಿದ ಆಫೀಸರರಿಗಾಗಲಿ ಲೈಸೆನ್ಸು ಮಾಡಿಸಿಕೊಳ್ಳುವ ಪ್ರತಿಕಾದ ಕಾಲ.	ಲೈಸೆನ್ಸು ಮಾಡಿಸುವದ ಕಾಲ, ಮತ್ತು ಯಾವ ಬಗ್ಗೆ ಮಾಡಿಸಲ್ಪಟ್ಟಿತೋ ಅಂಥಾ ಆಫೀಸರರ ರಜಿಸ್ಟರು ಮತ್ತು ತಾರೀಖು.
1	2	3	4	5	6	7	8	9	10	11	12

160.

ತಾರೀಖು 26ನೇ ಫಿಬ್ರವರಿ 1896.

ನಂ. 7714.—ರೆ. 3009.—ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ, ಫ್ರೆಂಚ್‌ರಾಕ್ಸ್ ಸಬ್ ಡಿವೀಜನ್ನಿನ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ರಿಗೆ, 1896ನೇ ಇಸವಿ ಫಿಬ್ರವರಿ 7ನೇ ಮಕ್ತಂ ಲಾಗಾಯತು ಐದು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತು.

ತಾರೀಖು 27ನೇ ಫಿಬ್ರವರಿ 1896.

ನಂ. 7720.—ರೆ. 3012.—ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರಾದ ಮೆಸ್ಸರ್ ಎ. ರಂಗಸ್ವಾಮಯ್ಯಂಗಾರ್ರಿಗೆ, 1896ನೇ ಇಸವಿ ಮಾರ್ಚಿ 1ನೇ ಮಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಯರಡುತಿಂಗಳೂ ಯಿಪ್ಪತ್ತೆಂಟು ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಸ್ಸರ್ ಎ. ರಂಗಸ್ವಾಮಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರಿಯಂತ ಚಿಕ್ಕಬಳ್ಳಾಪುರದ ಸಬ್ ಡಿವೀಜ್ ಆಫಿಸರ್ ಮೆಸ್ಸರ್ ಬಿ. ಜಿ. ಕೃಷ್ಣಯ್ಯಂಗಾರ್ರು ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 29ನೇ ಫಿಬ್ರವರಿ 1896.

ನಂ. 7771.—ರೆ. 3024.—ಮೈಸೂರ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾದ ಮೆಸ್ಸರ್ ಸಿ. ಮಾದಯ್ಯನವರಿಗೆ, 1896ನೇ ಇಸವಿ ಮಾರ್ಚಿ 10ನೇ ಮಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಮೆಸ್ಸರ್ ಸಿ. ಮಾದಯ್ಯನವರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಚಿಕ್ಕಬಳ್ಳಾಪುರದ ಸಬ್ ಡಿವೀಜ್ ಆಫಿಸರ್ ಮೆಸ್ಸರ್ ಬಿ. ಜಿ. ಕೃಷ್ಣಯ್ಯಂಗಾರ್ರು ಕೋಲಾರದ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತಾರೆ.

ನಂ. 7775.—ರೆ. 3028.—1896ನೇ ಇಸವಿ ಫಿಬ್ರವರಿ 27ನೇ ಮಕ್ತಂ 7720.—ರೆ. 3012ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಮಾಡಲ್ಪಟ್ಟ ಆಕ್ಟಿಂಗ್ ಮೊಕರರಾತಿಯನ್ನು ರದ್ದು ಮಾಡಿ, ಸಾಗರದ ಸಬ್ ಡಿವಿಜ್ ಆಫಿಸರ್ ಮೆಸ್ಸರ್ ಜಿ. ರಘುನಾಥರಾಯರು, ಮೆಸ್ಸರ್ ಎ. ರಂಗಸ್ವಾಮಯ್ಯಂಗಾರ್ರು ರಜಾದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮ್ಮಿಷನರ್ ವ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೇ ಮಾರ್ಚಿ 1896.

ನಂ. 7798.—ಫಾ. ಫೈ. 127—95.—1890ನೇ ಇಸವಿ ಫಿಬ್ರವರಿ 28ನೇ ಮಕ್ತಂ 362ನೇ ನಂಬರುಳ್ಳ ಗವರ್ಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಉಬ್ರಾಣಿ ಮತ್ತು ಚನ್ನಗಿರಿ ಡಿಪೋಗಳಲ್ಲಿ ಅವ್ವಲ್ ರಖಮಿನ ತೇಗದಪೋಲ್‌ಯಾನೆ ಕೂಚಗಳಿಗೆ ಚಿಲ್ಲರೆ ಮಾರಾಟದ ದರವು, 1895ನೇ ಇಸವಿ ಡಿಸೆಂಬರ್ ಗುರ್ರೆ ತಾರೀಖು ಲಾಗಾಯತು ಇದರಡಿ ಕಂಡಂತೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಡಿಪೋಗಳ ಹೆಸರು.	ತಫ್ಸೀಲ್.	ರಖಂ.	ಚಿಲ್ಲರೆ ಮಾರಾಟ ದರ ಸಲೆ ಅಡಿ 1ಕ್ಕೆ.			ಪರ ಸಲೆ ಅಡಿ 1ಕ್ಕೆ ದರ.		
			ಇಂದ.			ಗೆ.		
ಉಬ್ರಾಣಿ	ತೇಗದ ಕೂಚಗಳು ನಾಲ್ಕು ಸಲೆ ಅಡಿ ವರಿಗೆ.	ಅವ್ವಲ್	0	8	0	0	10	0
	ಡಿಟೋ ನಾಲ್ಕು ಅಡಿಯಿಂದೆ ಎಂಟು ಅಡಿ ವರಿಗೆ	ಡಿಟೋ	0	10	0	0	12	0
ಚನ್ನಗಿರಿ	ಡಿಟೋ ಎಂಟು ಅಡಿಯಿಂದ 12 ಅಡಿ ವರಿಗೆ	ಡಿಟೋ	0	12	0	0	14	0

ತಾರೀಖು 27ನೇ ಫಿಬ್ರವರಿ 1896.

ನಂ. 7823.—ರೆ. 3052.—ಹುಣಸೂರು ತಾಲ್ಲೂಕು ಅಮಲ್ದಾರ್ ಮಿಸ್ತರ್ ನಿಜಾಮುದ್ದೀನ್ ಅಲ್ಲೀಖಾನ್‌ರಿಗೆ, 1895ನೇ ಇಸವಿ ಅಕ್ಟೋಬರ್ 30ನೇ ಮುಕ್ತಂ 4186.—ರೆ. 1627ನೇ ನಂಬರ್ ಗವರ್ನಮೆಂಟ್ ಆರ್ಡರ್‌ನಾಮೆಯಿಂದ ಕೊಡಲ್ಪಟ್ಟ 15 ದಿವಸಗಳ ಕ್ಯಾಜುಯಲ್ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 3ನೇ ಮಾರ್ಚ್ 1896.

ನಂ. 7834.—ರೆ. 3058.—ಮೈಸೂರ್ ಸರ್ವೀಸ್ ರೆಗ್ಯುಲೇಷನ್ 172ನೇ ಆರ್ಟಿಕಲ್ ಅನುಸರಿಸಿ, ಎಕ್ಸೈಜ್ ಕಮಿಷ್ನರ್‌ರಾದ ಮಿಸ್ಟರ್ ಪಿ. ಎಸ್. ಪೂರ್ಣಯ್ಯನವರಿಗೆ, 1896ನೇ ಇಸವಿ ಫಿಬ್ರವರಿ 28ನೇ ಮುಕ್ತಂ ಲಾಗಾಯತು ಏಳು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

—ಸಿ. ಶ್ರೀನಿವಾಸಯ್ಯಂಗಾರ್,

ಜನರಲ್ ಮ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಟೆರಿ.